ALPS Udyawar Bhagavathi

Kanwathirtha. Kunjathur

# Academic Master Plan.

2025 - 2026.

## ಮುನ್ನುಡಿ

ಸಾಧಾರಣ ಎರಡು ವರ್ಷಗಳಷ್ಟು ಕಾಲ ಕೋವಿಡ್ ಮಹಾಮಾರಿಯಿಂದಾಗಿ ನಮ್ಮ ಮಕ್ಕಳಿಗೆ ಸಹಜವಾದ ಕಲಿಕಾನುಭವಗಳು ಲಭಿಸದ ಕಾರಣ ಪ್ರತಿ ಮಗುವೂ ಗಳಿಸಬೇಕಾದ ಸಾಮರ್ಥ್ಯಗಳನ್ನು ಗಳಿಸಲು ಸಾಧ್ಯವಾಗಲಿಲ್ಲವೆಂಬ ಅರಿವು ನಮಗೆಲ್ಲರಿಗೂ ಇದೆ. ಈ ಸಮಸ್ಯೆಯನ್ನು ಹೋಗಲಾಡಿಸಲು 2025-2026 ನೇ ಶೈಕ್ಷಣಿಕ ವರ್ಷದ ಅಕಾಡೆಮಿಕ್ ಮಾಸ್ಟರ್ ಪ್ಲಾನಿನಲ್ಲಿ ಭಾವನಾತ್ಮಕ, ಸಾಮಾಜಿಕ, ದೈಹಿಕ, ವೈಜ್ಞಾನಿಕ, ಸೃಜನಾತ್ಮಕ ಹಾಗೂ ಭಾಷಾ ವಿಕಾಸ ಮುಂದಲ-ಗಳಿಗೆ ಯೋಗ್ಯವಾಗುವಂತಹ ಅನೇಕ ಚಟುವಟಿಕೆಗಳನ್ನು ಆಯೋಜಿಸಲಾಗಿದೆ.

ಕೋವಿಡ್ ಕಾಲದಲ್ಲಿ ಮಕ್ಕಳಿಗೆ ನಷ್ಟವಾದ ಕಲಿಕಾ ಸಾಮರ್ಥ್ಯಗಳನ್ನು ಪುನಃ ಗಳಿಸುವುದು ಹಾಗೂ ಮಗುವು ಸಂತೋಷದಾಯಕವಾಗಿ ಕಲಿಯುವ ವಾತಾವರಣವನ್ನು ಶಾಲಾ ತರಗತಿಯಲ್ಲಿ ರೂಪಿಸಬಹುದು ಎಂಬುದಾಗಿದೆ ಈ ಅಕಾಡೆಮಿಕ್ ಮಾಸ್ಟರ್ ಪ್ಲಾನಿನ ಮುಖ್ಯ ಉದ್ದೇಶ.

ನೂತನವಾದ ಕಲಿಕಾ ತಂತ್ರಗಳ ಮೂಲಕ ವೈವಿಧ್ಯಮಯವಾದ ಕಲಿಕಾ ಚಟುವಟಿಕೆ-ಗಳನ್ನು ನಡೆಸುವುದರಿಂದ ಪ್ರತಿ ಮಗುವು ಕಲಿಕೆಯಲ್ಲಿ ಆಸಕ್ತಿ ಮೂಡಿಸಬಹುದು. ಈ ಮೂಲಕ ಎಲ್ಲಾ ಮಕ್ಕಳ ಕಲಿಕಾ ಮಟ್ಟವನ್ನು ಉತ್ತಮಗೊಳಿಸಲು ಸಾಧ್ಯವಾಗಬಹುದು.

# ಮುನ್ನುಡಿ

ಮನುಷ್ಯನು ಜೀವಿಗಳಲ್ಲಿ ಶ್ರೇಷ್ಠನು ಎಂಬುದರಲ್ಲಿ ಸಂಶಯವಿಲ್ಲ. ಅಂತೆಯೇ ಆತನು ತನ್ನ ಜೀವನದ ಆದಿಯಿಂದ ಅಂತ್ಯದವರೆಗೂ ಹಲವಾರು ಘಟ್ಟಗಳನ್ನು ಏಳು ಬೀಳುಗಳೊಂದಿಗೆ ಕಳೆಯುತ್ತಾನೆ. ಹಾಗೆಯೇ ಒಂದು ಸಂಸ್ಥೆಯು ಯಾವುದೇ ಇರಲಿ, ತನ್ನ ಏಳು ಬೀಳುಗಳ ಸರಮಾಲೆಯನ್ನು ಹೊಂದಿ ಶ್ರೇಷ್ಠ ಸಾಧಕನಾಗಿ ಸಾರ್ಥಕ್ಯ ಹೊಂದುವುದು.

ಉದ್ಯಾವರ ಭಗವತಿ ಕಿರಿಯ ಪ್ರಾಥಮಿಕ ಶಾಲೆಯು ಕಣ್ವತೀರ್ಥದ ಸಮುದ್ರ ಕಿನಾರೆಯಲ್ಲಿ ಪ್ರಕೃತಿ ಸೌಂದರ್ಯದಿಂದ ಕೂಡಿದ ಕ್ಷೇತ್ರದ ಕೇಂದ್ರವಾಗಿದೆ. ಈ ಶಾಲೆಯು ಊರ ಮತ್ತು ಪರವೂರ ಅಭಿಮಾನಿಗಳ ಸಹಕಾರದಿಂದ ಸ್ಥಾಪಿಸಲ್ಪಟ್ಟುದಾಗಿದೆ. 1951 ಮಾರ್ಚ್ ತಿಂಗಳಲ್ಲಿ ವಿದ್ಯಾ ಇಲಾಖೆಯಿಂದ ಮಂಜೂರಾತಿಯನ್ನು ಪಡೆದು ಇಂದಿನವರೆಗೆ ಯಶಸ್ವಿಯಾಗಿ ಉದ್ಯಾವರ ಬೋವಿ ವಿದ್ಯಾದಾಯಿನಿ ಸಂಘದವರು ನಡೆಸಿಕೊಂಡು ಬರುತ್ತಿದ್ದಾರೆ. ಈ ಶಾಲೆಯು ಕಣ್ವತೀರ್ಥದಲ್ಲಿದ್ದು ಮಂಜೇಶ್ವರ ಪಂಚಾಯತಿನ 21 ನೇ ವಾರ್ಡಿನಲ್ಲಿದೆ.

ಹಿಂದಿನ ಬೋವಿ ಸಮಾಜದಲ್ಲಿ ಬಡತನ ಹಾಗೂ ಅನಕ್ಷರತೆ ಇದ್ದುದರಿಂದ ಇದರ ನಿವಾರಣೆಗಾಗಿ ನಮ್ಮ ಊರಿನಲ್ಲಿ ಒಂದು ವಿದ್ಯಾ ಕೇಂದ್ರವನ್ನು ನಿರ್ಮಿಸಬೇಕು ಎಂಬ ಉದ್ದೇಶದಿಂದ ಊರ ಹಾಗೂ ಪರವೂರ ಕೆಲವು ವಿದ್ಯಾಭಿಮಾನಿಗಳು ಈ ಸಂಸ್ಥೆಯನ್ನು ಸ್ಥಾಪನೆ ಮಾಡಲು ಮುತುವರ್ಜಿಯಿಂದ ಶ್ರಮಿಸಿದ ಫಲವಾಗಿ ಇದೀಗ ಈ ಸಂಸ್ಥೆಯು ಯಶಸ್ವಿಯಾಗಿ ಮುನ್ನಡೆಯಲು ಕಾರಣವಾಯಿತು.

ಆರಂಭದಲ್ಲಿ ಕೇವಲ ಆರು ವಿದ್ಯಾರ್ಥಿಗಳಿಂದ ಆರಂಭಗೊಂಡ ಈ ಸಂಸ್ಥೆಯು ಕ್ರಮೇಣ ವಿದ್ಯಾರ್ಥಿಗಳ

ಸಂಖ್ಯೆ ಹೆಚ್ಚುತ್ತಾ ಸುಮಾರು 150 ವಿದ್ಯಾರ್ಥಿಗಳನ್ನು ಒಳಗೊಂಡ ಶಾಲೆಯಾಗಿ ಮಾರ್ಪಟ್ಟಿತು. ಈಗ ಆಂಗ್ಲ ಮಾಧ್ಯಮ ಶಾಲೆಗಳ ಪ್ರಭಾವದಿಂದ ಮಕ್ಕಳ ಸಂಖ್ಯೆಯು ಕಡಿಮೆಯಾಗುತ್ತಾ ಬಂದು ಸುಮಾರು 79 ಮಕ್ಕಳು 5 ಅಧ್ಯಾಪಕರನ್ನು ಒಳಗೊಂಡಿದೆ. ಹೆಚ್ಚಿನ ವಿರಾಮ ಸಮಯಗಳಲ್ಲಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗಾಗಿ ವಿನಿಯೋಗಿಸಿದ ಕಾರಣ ಮಕ್ಕಳ ಶೈಕ್ಷಣಿಕ ಮಟ್ಟದಲ್ಲಿ ಹೆಚ್ಚಿನ ಪ್ರಮಾಣದ ಪ್ರಗತಿ ಸಾಧ್ಯವಾಯಿತು. ಶಾಲೆಯು ಎಲ್ಲಾ ತರಹದ ಸೌಲಭ್ಯಗಳನ್ನು ಹೊಂದಿಕೊಂಡಿದ್ದು ಶಾಲಾ ಮಕ್ಕಳಲ್ಲಿ ಜಾತಿ ಭೇದವಿಲ್ಲದೆ ಏಕತೆಯಿಂದ ಮುನ್ನಡೆಯುವ ಪ್ರತೀಕತೆ ಈ ಶಾಲೆಗಿದೆ ಎಂದು ಹೇಳಲು ಹೆಮ್ಮೆ ಪಡುತ್ತೇವೆ.

ಸಮಸ್ಯೆಗಳು / ಇತಿಮಿತಿಗಳು

* ಮಕ್ಕಳ ಸಂಖ್ಯೆ
* ಆಟದ ಮೈದಾನ

# ದೃಷ್ಟಿಕೋನ

ನಮ್ಮ ಶಾಲೆಯು ಆರು ದಶಕಗಳ ಇತಿಹಾಸದಲ್ಲಿ ಸಾಧಿಸಿದ ಪ್ರಗತಿಯಲ್ಲಿ ಇದನ್ನು ನಡೆಸಿಕೊಂಡು ಬಂದ ವಿದ್ಯಾದಾಯಿನಿ ಸಂಸ್ಥೆ, ಅಧ್ಯಾಪಕ ವೃಂದ ಹಾಗೂ ಸಮಾಜದ ಪಾತ್ರ ಮಹತ್ತರವಾದುದು. ಶಾಲೆಯ ಯಾವುದೇ ವಿಷಯವಾದರೂ ಸರಿ, ಈಗ ಇರುವುದಕ್ಕಿಂತಲೂ ಮುಂದೆ ಯಾವ ರೀತಿಯಲ್ಲಿ ಉತ್ತಮ ಪಡಿಸಲು ಸಾಧ್ಯ ಎಂಬುದನ್ನು ಜೊತೆಗೂಡಿ ಚರ್ಚಿಸಿ ಮುಂದಿನ ದಿವಸಗಳಲ್ಲಿ ಅದನ್ನು ಜಾರಿಗೊಳಿಸುತ್ತಾ ಹೋದರೆ ಶಾಲೆಯು ಅಭಿವೃದ್ಧಿ ಪಥದತ್ತ ಸಾಗಿ ಉನ್ನತ ಸ್ಥಾನವನ್ನು ತನ್ನದಾಗಿಸಿ ಕೊಳ್ಳುವುದರಲ್ಲಿ ಸಂಶಯವಿಲ್ಲ.

ನಮ್ಮ ದೃಷ್ಟಿಕೋನದ ಪ್ರಕಾರ,

* ನರ್ಸರಿ ಹಾಗೂ ಸರಕಾರದ ಅನುಮತಿ ಪಡೆದು ಆಂಗ್ಲ ಪ್ರಾಥಮಿಕ ಶಾಲೆ.
* ಪ್ರತಿ ತರಗತಿಯಲ್ಲಿ Smart class room
* ಎಲ್ಲಾ ಸೌಕರ್ಯಗಳನ್ನೊಳಗೊಂಡ ವಿಶಾಲವಾದ ಆಟದ ಮೈದಾನ
* ಸಾಕ್ಷರ, ಮಧುರ ಕನ್ನಡ, Hello English ಗಳಂತಹ ತರಗತಿಗಳ ಅವಶ್ಯಕತೆಯೇ ಇಲ್ಲದಂತೆ ಮಕ್ಕಳನ್ನು [illegible] ಸಜ್ಜುಗೊಳಿಸುವುದು
* ಪಾಠೇತರ ಹಾಗೂ ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳನ್ನು ಒಂದನೇ ಸ್ಥಾನಕ್ಕೇರಿಸುವುದು.
* ಶಾಲೆಯ ಶೈಕ್ಷಣಿಕ, ಭೌತಿಕ ಹಾಗೂ ಸಾಮಾಜಿಕ ಮಟ್ಟವನ್ನು ಯಾವ ಶಾಲೆಗೂ ಕಡಿಮೆಯಿಲ್ಲ ಎಂಬಂತೆ ಉತ್ತಮ ಮಟ್ಟಕ್ಕೇರಿಸುವುದು.
* ಶಾಲಾ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸುವುದು

# ಉದ್ದೇಶ

ಶಾಲೆಯ ಪ್ರತಿಯೊಂದು ಕೆಲಸ ಕಾರ್ಯಗಳು, ಚಟುವಟಿಕೆಗಳು ಸುಸಜ್ಜಿತವಾಗಿ ನಡೆಯಲು ಪೂರ್ವ ತಯಾರಿ ಅತಿ ಅಗತ್ಯವಾಗಿರುತ್ತದೆ. ಉತ್ತಮ ಗುಣಮಟ್ಟದ ಶಿಕ್ಷಣವನ್ನು ಖಾತರಿ ಪಡಿಸಿ ವಿದ್ಯಾಲಯಗಳನ್ನು ಜ್ಞಾನದ ಕೇಂದ್ರಗಳಾಗಿ ಮಾರ್ಪಡಿಸುವುದು ಸಾರ್ವಜನಿಕ ಶಿಕ್ಷಣ ಸಂರಕ್ಷಣ ಯಜ್ಞದ ಪ್ರಧಾನ ಗುರಿಯಾಗಿರುತ್ತದೆ. ಪ್ರತಿಯೊಬ್ಬ ಮಗುವಿನಲ್ಲಿರುವ ವಿಶೇಷ ಸಾಮರ್ಥ್ಯಗಳನ್ನು, ನ್ಯೂನ್ಯತೆಗಳನ್ನು ಗುರುತಿಸಿ ಎಲ್ಲಾ ಮಕ್ಕಳಿಗೂ ಕಲಿಕಾ ಸಾಧನೆಗೆ ಸಮಾನವಾದ ಸಂದರ್ಭಗಳನ್ನು ಒದಗಿಸಲು ಸಾಧ್ಯ. ಆಗ ಒಂದು ಶಾಲೆಯ ಶೈಕ್ಷಣಿಕ ಸಾಮಾಜಿಕ ಹಾಗೂ ಭೌತಿಕ ಬೆಳವಣಿಗೆಗಾಗಿ ತಯಾರಿಸುವ ಸಮಗ್ರವಾದ ಶೈಕ್ಷಣಿಕ ಮಾಸ್ಟರ್ ಪ್ಲಾನ್ ಸಾರ್ವಜನಿಕ ಶಿಕ್ಷಣ ಸಂರಕ್ಷಣಾ ಯಜ್ಞದ ಸಂಸ್ಥೆಗೆ ಸಂಬಂಧಿಸಿದ ಅತಿ ಪ್ರಧಾನವಾದ ದಾಖಲೆಯಾಗಿರುತ್ತದೆ.

ಮುಂದಿನ ದಿನಗಳಲ್ಲಿ ವಿವಿಧ ಯೋಜನೆಗಳನ್ನು ರೂಪಿಸಿ ಶಾಲಾಭಿವೃದ್ಧಿ ಸಮಿತಿ, ಹಳೆ-ವಿದ್ಯಾರ್ಥಿ ಸಂಘ, ಪಂಚಾಯತಿ, S.S.A, P.T.A ಹಾಗೂ ಸರಕಾರದಿಂದ ಸಿಗುವಂತಹ ಬೆಂಬಲ-ದಿಂದ ಒಂದು ಉತ್ತಮ ಮಾದರಿ ಶಾಲೆಯನ್ನಾಗಿ ಮಾಡುವ ಯೋಜನೆಯನ್ನು ರೂಪಿಸಲಾಗುವುದು. ಹಾಗೆಯೇ ಶಾಲಾ ಮಕ್ಕಳ ಸಂಖ್ಯೆಯನ್ನು ಕೂಡಾ ಹೆಚ್ಚಿಸುವ ಒಂದು ಹೊಸ ಉದ್ದೇಶವನ್ನು ಕೂಡಾ Academic Master plan ಒಳಗೊಂಡಿದೆ.

# ಭೌತಿಕ ಸೌಕರ್ಯ

| ವಿಷಯ | ಈಗ ಇರುವವುಗಳು | ಇನ್ನೂ ಬೇಕಾದವು-ಗಳು | ಕಾಲಾವಧಿ | ಬೆಂಬಲ |
|---|---|---|---|---|
| ತರಗತಿ ಕೋಣೆಗಳು | 4 | ಇದನ್ನು ಸ್ಮಾರ್ಟ್ -ಗೊಳಿಸುವುದು | [illegible] | ಊರಿನವರು, P.T.A, OSA, SMC |
| ಮುಖ್ಯೋಪಾಧ್ಯಾಯರ ಕೊಠಡಿ | 1 | ಉತ್ತಮಗೊಳಿಸು-ವುದು | | |
| ಕಂಪ್ಯೂಟರ್ ಕೋಣೆ | 1 | ಸಂಪೂರ್ಣ ಸುಸಜ್ಜಿತ ಗೊಳಿಸುವುದು | | |
| ಲೈಬ್ರರಿ | ಪ್ರತ್ಯೇಕವಾಗಿ ಇಲ್ಲ | ಪ್ರತ್ಯೇಕ ಕೋಣೆ | | |
| ಹುಡುಗಿಯರ ಟಾಯ್ಲೆಟ್ | 3 | 2 | | |
| ಸಾಧಾರಣ ಟಾಯ್ಲೆಟ್ | 2 | 2 | | |
| ವಿದ್ಯುತ್ತೀಕರಣ | ಇದೆ | ಉತ್ತಮಗೊಳಿಸುವುದು | | |
| ಆವರಣ ಗೋಡೆ | ಇದೆ | ಉತ್ತಮಗೊಳಿಸುವುದು. | | |

| ವಿಷಯ | ಈಗ ಇರುವಂತಹವುಗಳು | ಇನ್ನೂ ಬೇಕಾದವುಗಳು | ಕಾಲಾವಧಿ | ಬೆಂಬಲ |
|---|---|---|---|---|
| ತರಗತಿ ವಿಭಾಜಕ ಗೋಡೆ | ಇಲ್ಲ | 4 ಕೊಠಡಿಗಳು | ಒಂದು ವರ್ಷ | P.T.A, SMC, D.S.D ದಾನಿಗಳು |
| ಪೀಠೋಪಕರಣಗಳು | 16 desk 12 chairs 22 bench 6 Tables | Self desk chair. | | |
| ಕುಡಿ ನೀರು ವ್ಯವಸ್ಥೆ | ಇದೆ | ಉತ್ತಮ ಪಡಿಸುವುದು | | |
| ಅಡುಗೆ ಕೋಣೆ | ಇದೆ | ಸುಸಜ್ಜಿತ ಅಡುಗೆ ಕೋಣೆ | | |
| ಆಟದ ಮೈದಾನ | ಇಲ್ಲ | ವಿಸ್ತಾರ ಆಟದ ಮೈದಾನ | | |

ಇದಲ್ಲದೆ, ಗಂಜಿ ವಿತರಣಾ ಹಾಲ್, ಮೌಲ್ಯ ಸಂಸ್ಕರಣಾ ವ್ಯವಸ್ಥೆ, ಮಳೆ ನೀರು ಸಂಗ್ರಹಣೆ, ಉತ್ತಮ ಸೌಕರ್ಯ ಯುಕ್ತ ಸಭಾಂಗಣ, ಲ್ಯಾಬ್, ವಿದ್ಯುತ್ ಚಾರ್ಜ್, ತರಬೇತಿ ಕೇಂದ್ರ, ತರಗತಿ ಕೋಣೆಗಳು ಅಕ್ಷರದಾಸೋಹ ಎಂಬಂತಾದ ಯೋಜನೆಗಳು ದೀರ್ಘ ಕಾಲದ ಯೋಜನೆಗಳಾಗಿವೆ. ಅದೇ ರೀತಿಯಲ್ಲಿ 10 ಕಂಪ್ಯೂಟರ್ ಯೋಜನೆಯು ಚರ್ಚೆಯಲ್ಲಿದೆ. ಸಮಾಜದ ಉತ್ತಮ ಸಹಭಾಗಿತ್ವದಿಂದ ಈ ಯೋಜನೆಗಳಲ್ಲಿ ಉತ್ತಮ ಫಲಿತಾಂಶ ನೀಡಬಹುದೆಂಬ ನಿರೀಕ್ಷೆ ಇದೆ

# ಉಪಸಂಹಾರ

ಸಮಾಜದ ಬೆಂಬಲವಿಲ್ಲದೆ ಯಾವ ಸಂಸ್ಥೆಯು ಬೆಳವಣಿಗೆಯನ್ನು ಹೊಂದಲು ಸಾಧ್ಯವಿಲ್ಲ. ಇಲ್ಲಿ ವಿದ್ಯಾರ್ಥಿಗಳು, ಊರವರು ಹಾಗೂ ರಕ್ಷಕರು ಶಾಲೆಯ ಬೆನ್ನೆಲುಬಾಗಿರುವರು. ಸಾಮಾಜಿಕ ಸಹಭಾಗಿತ್ವದೊಂದಿಗೆ ಈಗಾಗಲೇ ಶಾಲೆಯಲ್ಲಿ ಕೆಲವು ಅಭಿವೃದ್ಧಿ ಕಾರ್ಯಗಳು ನಡೆದಿರುತ್ತವೆ. ಇನ್ನು ಹಲವಾರು ಮುಂದಾಲೋಚನೆಗಳೊಂದಿಗೆ ಶಾಲಾ Acadamic Master plan ನ್ನು ತಯಾರು ಮಾಡಿರುತ್ತೇವೆ. ಶಾಲಾ ಸಮಿತಿ ಸದಸ್ಯರು, ಅಧ್ಯಾಪಕ ವೃಂದ, OSA ಸದಸ್ಯರು, P.T.A, M.P.T.A ಯ ಸದಸ್ಯರು ಸೇರಿಕೊಂಡು ನಡೆಸಿದಂತಹ ಯೋಜನೆಯಾಗಿದೆ ಈ Academic Master plan. ಅಂದಾಜು ಖರ್ಚುಗಳು 50 ಲಕ್ಷಗಳನ್ನು ಮೀರಿದೆ. ಇದನ್ನು ಶಾಲಾ ಸಮಿತಿ, ಸ ಹಾಗೂ OSA ವಹಿಸುತ್ತಿದೆ. ಈ ಮೂಲಕ ನಮ್ಮ ಶಾಲೆಯು ಒಂದು ಉತ್ತಮ ಮಾದರಿ ಶಾಲೆಯಾಗುವುದರಲ್ಲಿ ಸಂಶಯವಿಲ್ಲ.

# ಶಾಲಾ ಮಾಹಿತಿ.

ಶಾಲೆಯ ಹೆಸರು: ಉದ್ಯಾವರ ಭಗವತಿ ಕಿರಿಯ ಪ್ರಾಥಮಿಕ ಶಾಲೆ. ಕಣ್ವತೀರ್ಥ.

ಸರಕಾರ/ ಅನುದಾನಿತ: ಅನುದಾನಿತ.

ವಿಳಾಸ : ಉದ್ಯಾವರ ಭಗವತಿ ಕಿರಿಯ ಪ್ರಾಥಮಿಕ ಶಾಲೆ. ಕಣ್ವತೀರ್ಥ. ಕುಂಜತ್ತೂರು. 671323

ಪಂಚಾಯತ್ : ಮಂಜೇಶ್ವರ

ಬಿ. ಆರ್. ಸಿ : ಮಂಜೇಶ್ವರ

ಶಾಲಾ ಕೋಡ್ : 11230

ಫೋನ್ ನಂಬರ್ : 04494 279293. MBL 9495953396

Email : alpsudyawarbhagavathi@gmail.com.

## ಮಕ್ಕಳ ಸಂಖ್ಯೆ 2025-26.

| ವಿಭಾಗ | I | II | III | IV | ಒಟ್ಟು. |
|---|---|---|---|---|---|
| ಗಂಡು | 6 | 5 | 9 | 8 | 28 |
| ಹೆಣ್ಣು | 11 | 5 | 7 | 9 | 32 |
| ಒಟ್ಟು | 17 | 10 | 16 | 17 | 60 |

## ಅಧ್ಯಾಪಕರು.

ಮಂಜೂರಾತಿ ಹುದ್ದೆ - 5

ಈಗ ಇರುವ ಅಧ್ಯಾಪಕರು -

ಒಟ್ಟು. -

ಈಗ ಇಬ್ಬರು ರಜೆಯಲ್ಲಿ ಇರುವರು.

## ಮುಖ್ಯ ಉದ್ದೇಶ – ಓದುವಿಕೆ ಹಾಗೂ ಬರೆಯುವಿಕೆ.

| ವಿಷಯ | ಸಂಗತಿ | ಚಟುವಟಿಕೆ | ಚಟುವಟಿಕೆಯ ವಿವರ | ಜವಾಬ್ದಾರಿ | ಕಾಲಾವಧಿ |
| --- | --- | --- | --- | --- | --- |
| ಕನ್ನಡ. | ಎಲ್ಲಾ ಮಕ್ಕಳಿಗೂ ಅಕ್ಷರ ಮಾಲೆ, ಪದ ರಚನೆ, ಒತ್ತಕ್ಷರಗಳ ಅರಿವು ಮೂಡಿಸುವುದು. | ಅಕ್ಷರ ಕಾರ್ಡ್‌ಗಳು, ಪದ ಕಾರ್ಡ್‌ಗಳು ಒತ್ತಕ್ಷರಗಳ ಕಾರ್ಡ್‌ಗಳು. | * ಚಾರ್ಟ್ ಪೇಪರನ್ನು ಸಣ್ಣ ಸಣ್ಣ ತುಂಡುಗಳಾಗಿ ಮಾಡಿ ಅಕ್ಷರಗಳನ್ನು ಬರೆದು ತರಗತಿಯಲ್ಲಿ ಜೋಡಿಸು-ವುದು.<br>* ಒತ್ತಕ್ಷರಗಳನ್ನು ಚಾರ್ಟ್ ಪೇಪ-ರಿನ ತುಂಡುಗಳಲ್ಲಿ ಬರೆದು ಅದರ ಹಿಂಭಾಗದಲ್ಲಿ ಅದಕ್ಕೆ ಸಂಬಂಧಿಸಿದ ಪದಗಳನ್ನು ಬರೆದು ವಿರಾಮದ ವೇಳೆಯಲ್ಲಿ ತಂಡತಂಡ ಆಡಿಸು-ವುದು.<br>* ಪಾಠ ಭಾಗದಲ್ಲಿ ಬರುವ ನವೀನ ಪದಗಳ ಪಟ್ಟಿ ಮಾಡಿ ಓದುವುದು. | ತರಗತಿ ಅಧ್ಯಾಪಕರು. | ಜೂನ್ – ಮಾರ್ಚ್ |

* ಧಾರಾಳ ಪುಸ್ತಕಗಳನ್ನು ಓದಲು ಅವಕಾಶ ಮಾಡಿ ಕೊಡುತ್ತೇವೆ.

* ತರಗತಿ ಗ್ರಂಥಾಲಯವನ್ನು ಸಜ್ಜುಗೊಳಿಸಿ ಮಕ್ಕಳ ಮಟ್ಟಕ್ಕನುಗುಣವಾದ ಪುಸ್ತಕಗಳನ್ನು ಲಭ್ಯಗೊಳಿಸುತ್ತೇವೆ.

* ಚಿತ್ರ ಪುಸ್ತಕಗಳನ್ನು ನೀಡಿ ಅದಕ್ಕೆ ಹೊಂದಿಕೆಯಾಗುವ ಪದ ರಚನೆ, ವಾಕ್ಯ ರಚನೆ ಮೊದಲು ಪ್ರೋತ್ಸಾಹಿಸುತ್ತೇವೆ

* ಗ್ರಂಥ ಪುಸ್ತಕ ನೀಡಿ ಅದರಲ್ಲಿರುವ ಆಶಯ ಮಂಡಿಸಲು ಹೇಳುತ್ತೇವೆ.

* ಕಥೆ ಮುಂದುವರಿಕೆ, ಕವಿತೆ ಮುಂದುವರಿಕೆ ಮುಂತಾದ ಚಟುವಟಿಕೆಗಳನ್ನು ಮಾಡಿಸುತ್ತೇವೆ.

* ಅಕ್ಷರಗಳ ಮೂಲಕ ಜೀವಿಗಳ ಚಿತ್ರ ರಚನೆ ಚಟುವಟಿಕೆ ಮಾಡಿಸುತ್ತೇವೆ.

ಶಾಲೆಯ ಹೆಸರು: A.L.P.S. Udyawara Bhagavathi, Kanwathirtha.

| ವಿಷಯ/ ವಿಭಾಗ | ಯೋಜನೆಯ ಹೆಸರು | ಚಟುವಟಿಕೆ ವಿವರ | ಸಮಯ. |
|---|---|---|---|
| ಕನ್ನಡ I ರಿಂದ IV ತರಗತಿ ವರೆಗೆ. | 'ನಾನು ಪದಗಳ ತಯಾರಿಸಬಲ್ಲೆ. | • ಪದ ಕಾರ್ಡ್ ತಯಾರಿ – ಒಂದೊಂದು ಕಾರ್ಡ್‌ಗಳ ವಿತರಣೆ – ಪದಗಳನ್ನು ಓದುವುದು – ಗುಂಪುಗಳ ರಚನೆ – ಅಕ್ಷರಗಳನ್ನು ಓದುವುದು – ಹೊಸ ನವೀನ ಪದಗಳನ್ನು ರಚಿಸುವುದು – ಓದುವುದು – ಮೌಲ್ಯಮಾಪನ. | |
| ಕನ್ನಡ – IV ನೇ ತರಗತಿ ವರೆಗೆ | ಚಿತ್ರ ಕಥೆ ಓದು. | • ಚಾರ್ಟಿನಲ್ಲಿ ನೀಡಿದ ಚಿತ್ರಗಳ ನಿರೀಕ್ಷಣೆ – ಬಾಯ್ದೆರೆದು ವಿಷಯ ಮಂಡನೆ – ಪದಗಳನ್ನು ಬರೆಯುವುದು – ಗುಂಪುಗಳ ರಚನೆ – ಚಿತ್ರದ ಕುರಿತು ವಾಕ್ಯ ರಚಿಸುವುದು – ಕ್ರೋಢೀಕರಣ. – ಚಿತ್ರ ಕಥೆ ಪ್ರದರ್ಶನ. | |